ದಿನಾಂಕಃ 02.03.2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀ ಎ.ಕೆ.ಎನ್. ವಕೀಲರಿಂದಃ

ನಾನು ಈ ದಾವೆಯ ಪ್ರತಿವಾದಿ ಪರ ಜಿ.ಪಿ.ಎ. ದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ ಹಾಗೂ ಅವು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸುತ್ತೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಪ್ರತಿವಾದಿ ಬರೆದುಕೊಟ್ಟ ಮುಖ್ತಾರುನಾಮೆಯನ್ನು ನಿಡಿ-1 ಎಂದು, ಕಂದಾಯ ಪಾವತಿ ರಶೀದಿಯ ದೃಢೀಕೃತ ನಕಲನ್ನು ನಿಡಿ-2 ಎಂದು, ಎಂ.ಆರ್.9/1996-97 ರ ಮುಟೇಶನ ರೆಜಿಸ್ಟರ್ ನ ದೃಢೀಕೃತ ನಕಲನ್ನು ನಿಡಿ-3 ಎಂದು, ದಿಃ 20.11.1944 ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಡಿ-4 ಎಂದು, ಸ.ನಂ.35 ರ ಹಿಸ್ಸಾ ಸರ್ವೆ ಬಾಬ್ತು ನಕಾಶೆಯ ದೃಢೀಕೃತ ನಕಲನ್ನು ನಿಡಿ-5 ಎಂದು, ಸ.ನಂ.35 ರ ಇಂಡೆಕ್ಸ್ ಆಫ್ ಲ್ಯಾಂಡ್ ನ ದೃಢೀಕೃತ ನಕಲನ್ನು ನಿಡಿ-6 ಎಂದು, ಸ.ನಂ.35/3 ರ ರೆಕಾರ್ಡ್ ಆಫ್ ರೈಟ್ಸ್ ನ ದೃಢೀಕೃತ ನಕಲನ್ನು ನಿಡಿ-7 ಎಂದು, ಸ.ನಂ. 35/3 ರ ಮೂರು ಗಣಕೀಕೃತ ಪಹಣಿಗಳನ್ನು ನಿಡಿ-8 ರಿಂದ 10 ಎಂದು, ಸ.ನಂ. 35/3 ರ 4 ಪುಟದ ಎರಡು ಗಣಕೀಕೃತ ಪಹಣಿಗಳನ್ನು ನಿಡಿ-11 ಮತ್ತು 12 ಎಂದು, ಸ.ನಂ. 35/3 ರ 2 ಪುಟದ ಎರಡು ಗಣಕೀಕೃತ ಪಹಣಿಗಳನ್ನು ನಿಡಿ-13 ಮತ್ತು 14 ಎಂದು ಗುರುತಿಸಲಾಯಿತು.

**(ಪ್ರತಿವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ,
ನ್ಯಾಯಾಧೀಶರು, ಹುಣಸೂರು.